# ಅನುಷಾ ಹೊಸ ಪಥ

■ ಎಸ್ಸೆನ್

**'ಕಂಗ್ರಾಜುಲೇಷನ್ಸ್ ಬ್ರದರ್' ಸಿನಿಮಾ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿರುವ ನಟಿ ಅನುಷಾ ಅವರಿಗೆ ಮನರಂಜನೆ ನೀಡುವಂಥ ಪಾತ್ರಗಳಲ್ಲಿ ತೊಡಗಿಸಿಕೊಳ್ಳುವ ಇಂಗಿತ.**



'ಒಳ್ಳೆಯ ಪಾತ್ರಗಳಲ್ಲಿ ನನ್ನನ್ನು ನಾನು ಕಾಣಬೇಕು. ಕನ್ನಡದಲ್ಲಿ ಉತ್ತಮ ಸಿನಿಮಾಗಳ ಭಾಗವಾಗಬೇಕು ಎಂಬುದೇ ನನ್ನಾಸೆ' ಎಂದು ಅರಳು ಕಣ್ಣುಗಳಲ್ಲಿ ಸಿನಿಮಾ ಒಲವನ್ನು ಹರಿಸುತ್ತಾರೆ ನಟಿ ಅನುಷಾ.

'ಕಂಗ್ರಾಜುಲೇಷನ್ಸ್ ಬ್ರದರ್' ಸಿನಿಮಾದಲ್ಲಿ ಸಿರಿ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ಅನುಷಾ ಅವರಿಗೆ ಈ ಸಿನಿಮಾ ಚೊಚ್ಚಲ ಹೆಜ್ಜೆ. ಮೊದಲ ಹೆಜ್ಜೆಯನ್ನು ಹೊಸ ಹುರುಪಿನಿಂದ ಇಟ್ಟಿರುವ ಅವರಿಗೆ ಜನರ ಮನಸೆಳೆಯುವ ಪಾತ್ರಗಳಲ್ಲಿ ತಮ್ಮನ್ನು ಕಂಡುಕೊಳ್ಳುವ ಅಭಿಲಾಷೆ.

ಬೆಂಗಳೂರಿನಲ್ಲಿ ಫ್ಯಾಷನ್ ಡಿಸೈನಿಂಗ್ ಮಾಡಿರುವ ಅನುಷಾ ಅವರಲ್ಲಿ ಬಣ್ಣದ ಲೋಕದ ಒಲವು ಆರಂಭವಾಗಿದ್ದು ಜಾಹೀರಾತೊಂದರ ಮೂಲಕ. ಚಾನಲ್ ಒಂದರ ಪ್ರೋಮೊ ಶೂಟ್‌ನಲ್ಲಿ ತೊಡಗಿಕೊಳ್ಳುವ ಅವಕಾಶ ಅಚಾನಕ್ಕಾಗಿ ಒದಗಿಬಂದಿತ್ತು. ಅದರಲ್ಲಿ ಕಾಣಿಸಿಕೊಂಡ ನಂತರ ಬಂದ ಮೆಚ್ಚುಗೆಗಳು ಅವರಲ್ಲಿ ನಟನೆಯ ಕುರಿತ ಆಸಕ್ತಿಯೂ ಚಿಗುರೊಡೆಯುವಂತೆ ಮಾಡಿದವು. ನಾನೇಕೆ ತೆರೆ ಮೇಲೆ ಕಾಣಿಸಿಕೊಳ್ಳಬಾರದು ಎಂಬ ಸಣ್ಣ ಆಲೋಚನೆ ಅವರ ಮನ ಹೊಕ್ಕಿ ಅಭಿನಯವನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡಿತು.

ಬರೀ ಆಸೆ ಇದ್ದರೆ ಸಾಲದು, ಅದಕ್ಕೆ ತಕ್ಕ ತಯಾರಿಯನ್ನೂ ಮಾಡಬೇಕು ಎಂದು ನಟನಾ ತರಗತಿಗೆ ಕಾಲಿಟ್ಟರು ಅನುಷಾ.

''ನಟನೆ ಕಲಿಯಲು ಉಷಾ ಭಂಡಾರಿ ಅವರ ಬಳಿ ಒಂದು ವರ್ಷ ತರಬೇತಿ ಪಡೆದುಕೊಂಡೆ. ನಂತರ ಹಲವು ಕಡೆ ಆಡಿಷನ್‌ಗಳನ್ನು ಕೊಡುತ್ತಿದ್ದೆ. ಧಾರಾವಾಹಿಗಳಿಗೂ ಪ್ರಯತ್ನಿಸುತ್ತಿದ್ದೆ. ಅದೇ ಸಮಯದಲ್ಲಿ ಸಿನಿಮಾಗೆ ಆಡಿಷನ್ ಕರೆ ಬಂದಿತ್ತು. ನೇರ ಸಿನಿಮಾದಲ್ಲಿಯೇ ನಟಿಸಲು ಅವಕಾಶ ಸಿಕ್ಕಿದ್ದು ನನ್ನ ಪಾಲಿನ ಅದೃಷ್ಟ'' ಎಂದು ಸಂತಸದಿಂದ ಹೇಳಿಕೊಳ್ಳುತ್ತಾರೆ.

'ಮೊದಲ ಬಾರಿ ಕ್ಯಾಮೆರಾ ಎದುರಿಸುವಾಗ ತುಂಬಾ ಭಯಗೊಂಡಿದ್ದೆ. ಶೂಟಿಂಗ್‌ನ ಮೊದಲ ದಿನವಂತೂ ನಾನೇನು ಮಾಡುತ್ತಿದ್ದೇನೆ, ಸರಿ ಮಾಡುತ್ತಿದ್ದೆನಾ ಇಲ್ಲವಾ ಏನೂ ಗೊತ್ತಾಗುತ್ತಿರಲಿಲ್ಲ. ಎರಡು ಮೂರು ದಿನಗಳಲ್ಲಿ ಒಂದು ಹಿಡಿತ ಸಿಕ್ಕಿತು. ಸಿನಿಮಾ ಚಿತ್ರೀಕರಣ ಆರಂಭಕ್ಕೂ ಮುನ್ನ ವರ್ಕ್‌ಶಾಪ್ ಮಾಡಿದ್ದು ಬಹಳ ಸಹಾಯ ಮಾಡಿತು' ಎಂದು ಮೊದಲ ಸಿನಿಮಾ ಕೊಟ್ಟ ಅನುಭವಗಳನ್ನು ಪ್ರೀತಿಯಿಂದ ಹಂಚಿಕೊಳ್ಳುತ್ತಾರೆ.

ಹಾಗೇ ಸವಾಲುಗಳ ಕುರಿತೂ ಮಾತನಾಡುತ್ತಾ, 'ಸಿನಿಮಾದಲ್ಲಿ ನನ್ನ ಜೊತೆಗಿದ್ದವರು ಅನುಭವಿಗಳಾಗಿದ್ದರು. ಕ್ಯಾಮೆರಾಫ್ರೆಂಡ್ಲಿ ಆಗಿದ್ದರು. ನಾನು ಮೊದಲ ಬಾರಿ ನಟಿಸುತ್ತಿದ್ದವಳು. ಭಯ ತುಂಬಿಕೊಂಡಿತ್ತು. ಈ ನಡುವೆಯೂ ಎಲ್ಲರ ಸಹಕಾರ ನನ್ನನ್ನು ತಿದ್ದಿತೀಡಿತು' ಎನ್ನುತ್ತಾರೆ.

ತುಂಬಾ ಗಂಭೀರವಾದ ಪಾತ್ರಗಳಿಗಿಂತ ಮನರಂಜನೆ ನೀಡುವಂಥ ಪಾತ್ರಗಳನ್ನು ಮಾಡಬೇಕು ಎಂಬುದು ಅನುಷಾ ಮನದಾಸೆ. 'ಕಾಮಿಡಿ, ಫನ್ ಇರುವಂಥ ಪಾತ್ರಗಳನ್ನು ಜನರು ಇಷ್ಟಪಟ್ಟು ನೋಡುತ್ತಾರೆ' ಎನ್ನುತ್ತಲೇ, 'ಕಥೆ ನಮ್ಮನ್ನು ಬೋರ್ ಹೊಡೆಸಬಾರದು. ನಮ್ಮನ್ನು ಹಿಡಿದು ಕೂರಿಸುವಂತಿರಬೇಕು' ಎಂದು ತಮ್ಮ ನಿರೀಕ್ಷೆಯನ್ನೂ ತೆರೆದಿಡುತ್ತಾರೆ.

ಸದ್ಯ 'ಕಂಗ್ರಾಜುಲೇಷನ್ಸ್ ಬ್ರದರ್' ಸಿನಿಮಾ ಬಿಡುಗಡೆಗೆ ಸಿದ್ಧವಾಗಿದ್ದು, ಮತ್ತಷ್ಟು ಸಿನಿಮಾ ಮಾತುಕತೆಗಳು ನಡೆಯುತ್ತಿರುವುದಾಗಿ ಅನುಷಾ ತಿಳಿಸುತ್ತಾರೆ. ■